# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 286 |
| ಉತ್ತರಿಸುವ ದಿನಾಂಕ | 15.02.2023 |
| ಉತ್ತರಿಸುವ ಸಚಿವರು | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ನಾಲ್ಕು ವರ್ಷಗಳಲ್ಲಿ ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆಯಡಿ ಆಯ್ಕೆ ಪತ್ರ ನೀಡಲಾದ ಫಲಾನುಭವಿಗಳಿಗೆ ವಸತಿ ಹಂಚಿಕೆ ಮಾಡದೇ ಇರುವ ಪ್ರಕರಣಗಳೆಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು) | "ಮುಖ್ಯ ಮಂತ್ರಿಗಳ ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ "ಸದರಿ ಯೋಜನೆಯಡಿಯಲ್ಲಿ ಹಂಚಿಕೆ ಪ್ರಕ್ರಿಯೆ ಇರುವುದಿಲ್ಲ, ಬದಲಾಗಿ ಅರ್ಜಿದಾರರೆ ತಮ್ಮ ಇಚ್ಛೆಯುಳ್ಳ ಯೋಜನಾ ಸ್ಥಳದಲ್ಲಿನ ಇಚ್ಛೆಯುಳ್ಳ ಅಂತಸ್ತಿನಲ್ಲಿ ತಮಗೆ ಇಚ್ಛೆಯುಳ್ಳ ಪ್ಲ್ಯಾಟ್ /ಮನೆಯನ್ನು "ಆನ್-ಲೈನ್ ಮೂಲಕ" ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆ ದಿನಾಂಕ: 23.08.2021 ರಿಂದ ಜಾರಿಯಲ್ಲಿದೆ. |
| ಆ) | ಸದರಿ ಯೋಜನೆಯಡಿ ಆಯ್ಕೆ ಪತ್ರ ಪಡೆದ ಫಲಾನುಭವಿಗಳಿಗೆ ವಸತಿ ಹಂಚಿಕೆ ಮಾಡದಿರುವ ಬಗ್ಗೆ ಫಲಾನುಭವಿಗಳಿಂದ ದೂರು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಅರ್ಜಿದಾರರೆ ತಮ್ಮ ಇಚ್ಛೆಯುಳ್ಳ ಯೋಜನಾ ಸ್ಥಳದಲ್ಲಿನ ಬಹುಮಹಡಿ ಕಟ್ಟಡದ ಅಂತಸ್ತಿನಲ್ಲಿ ತಮಗೆ ಇಚ್ಛೆಯುಳ್ಳ ಪ್ಲ್ಯಾಟ್ /ಮನೆಯನ್ನು "ಆನ್-ಲೈನ್ ಮೂಲಕ" ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಅರ್ಜಿದಾರರು ತಮ್ಮ ಇಚ್ಛೆಯ ಪ್ಲ್ಯಾಟ್ /ಮನೆಯನ್ನು ಆನ್-ಲೈನ್ ನಲ್ಲಿ ಆಯ್ಕೆ ಮಾಡಿಕೊಂಡ ಕೂಡಲೇ ಅವರಿಗೆ "ತಾತ್ಕಲಿಕ ಹಂಚಿಕೆ ಪತ್ರ" ದೊರೆಯುತ್ತದೆ. |
| ಇ) | ಆಯ್ಕೆ ಪತ್ರ ನೀಡಲಾದ ಫಲಾನುಭವಿಗಳಿಗೆ ವಸತಿ ಹಂಚಿಕೆ ಮಾಡದೆ ತಾರತಮ್ಯ ಮಾಡಿ ಮತ್ತೊಮ್ಮೆ ಅರ್ಜಿ ಸಲ್ಲಿಸುವಂತೆ ತಿಳಿಸಿರುವುದು ನಿಜವೇ; ಹಾಗಿದ್ದಲ್ಲಿ, ಆಯ್ಕೆ ಪತ್ರ ಪಡೆದ ಫಲಾನುಭವಿಗಳಿಗೆ ಆಯ್ಕೆಯನ್ನು ರದ್ದುಪಡಿಸಲು ಕಾರಣಗಳೇನು; | |
| ಈ) | ರಾಜ್ಯದಲ್ಲಿ ಸದ್ಯ ಎಲ್ಲೆಲ್ಲಿ ಮುಖ್ಯ ಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ ಕಾಮಗಾರಿ ಮುಕ್ತಾಯವಾಗಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಸಿದ್ಧವಾಗಿದೆ? (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಬೆಂಗಳೂರು ನಗರದಲ್ಲಿ ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗಾಗಿ "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿಯಲ್ಲಿ ವಸತಿ ಕಲ್ಪಿಸಲು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)- "ಸರ್ವರಿಗೂ ಸೂರು" ಅಭಿಯಾನದಡಿಯ ಅನುದಾನದ ಮೊತ್ತವನ್ನು ಸಂಯೋಜಿಸಿಕೊಂಡು ಹಾಗೂ ಫಲಾನುಭವಿ ವಂತಿಗೆಯೊಂದಿಗೆ ಸದರಿ ಯೋಜನೆಯಡಿ ನಿರ್ಮಿಸುವ ನಿವೇಶನಗಳ ಅಥವಾ ಬಹುಮಹಡಿ ಮನೆಗಳ ಅಥವಾ ಉಳಿಕೆ ಜಮೀನನ್ನು ಮಾರಾಟ ಮಾಡಿ, ಮಾರಾಟದಿಂದ ಬರುವ ಮೊತ್ತದಿಂದ ಸದರಿ ವಸತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮೊದಲಿಗೆ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತಗೊಂಡಿದ್ದ, ಈ ಯೋಜನೆಯನ್ನು ಸರ್ಕಾರದ ಆದೇಶ |

| | | |
|---|---|---|
| | | ಸಂಖ್ಯೆ:ವಇ 31 ಹೆಚ್‌ಎಫ್‌ಎ 2019 (ಭಾಗ-1) ದಿನಾಂಕ: 16.01.2020 ರಲ್ಲಿ ಈ ಯೋಜನೆಯ ಭೌಗೋಳಿಕ ವ್ಯಾಪ್ತಿಯನ್ನು ಬೆಂಗಳೂರು ನಗರ ಜಿಲ್ಲೆಗೆ ವಿಸ್ತರಿಸಲಾಗಿದೆ.<br><br>ಪ್ರಸ್ತುತ, ಬೆಂಗಳೂರು ನಗರ ಜಿಲ್ಲೆಯ 14 ವಿವಿಧ ಯೋಜನಾ ಸ್ಥಳಗಳಲ್ಲಿ 4789 ಬಹುಮಹಡಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |

ಸಂಖ್ಯೆ: ವಇ 30 ಹೆಚ್‌ಎಫ್‌ಎ 2023]

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

**ಅನುಬಂಧ - 1**

**ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ**

**"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"**

**ಫಲಾನುಭವಿಗಳಿಗೆ ಹಂಚಿಕೆ ಮಾಡಲು ಸಿದ್ದವಿರುವ 1 ಬಿ.ಹೆಚ್.ಕೆ. ಬಹುಮಹಡಿ ಮನೆಗಳ ವಿವರಗಳು**

| ಕ್ರಮ ಸಂಖ್ಯೆ | ಪ್ಯಾಕೇಜ್ ಸಂಖ್ಯೆ | ಗ್ರಾಮ | ಸರ್ವೆ. ನಂ. | ಮಾದರಿ | ಮನೆಗಳ ಸಂಖ್ಯೆ (1 BHK) |
|---|---|---|---|---|---|
| 1 | 5 | ಸಾದೇನಹಳ್ಳಿ | 30 | ಜಿ+3 | 128 |
| 2 | 5 | ನವರತ್ನ ಅಗ್ರಹಾರ | 14 | ಜಿ+3 | 140 |
| 3 | 4 | ಅಗ್ರಹಾರ ಪಾಳ್ಯ | 30 | ಜಿ+3 | 488 |
| 4 | 4 | ಪಿಲ್ಲ ಹಳ್ಳಿ | 53 | ಜಿ+3 | 251 |
| 5 | 8B | ದೇವಗೆರೆ | 67 | ಜಿ+3 | 140 |
| 6 | 2 | ಕೂಗೂರು | 69 | ಜಿ+3 | 256 |
| 7 | 6 | ಕೆಂಚನಪುರ | 63 | ಎಸ್+14 | 225 |
| 8 | 1 | ಬಿದರ್ರಹಳ್ಳಿ | 193 | ಎಸ್+14 | 448 |
| 9 | 2 | ದೊಡ್ಡನಾಗಮಂಗಲ | 11 | ಜಿ+3 | 186 |
| 10 | 9B | ಚಿಕ್ಕಲೂರು ರಾಂಪುರ | 1 | ಎಸ್+14 | 516 |
| 11 | 7 | ನೆಲಗುಳಿ | 145 | ಎಸ್+14 | 904 |
| 12 | 2 | ಚಿಕ್ಕನಹಳ್ಳಿ ಕಾಮನಹಳ್ಳಿ | 71 | ಎಸ್+13 | 530 |
| 13 | 2 | ದೇವಗೆರೆ | 68 | ಎಸ್+14 | 312 |
| 14 | 3 | ಲಿಂಗಾಪುರ | 112 | ಎಸ್+13 | 265 |
| | | **ಒಟ್ಟು** | | | **4789** |